ಬೇಕೆಂದು ಒತ್ತಡ ತಂದಿದ್ದರಿಂದ ಹಂತ ಹಂತವಾಗಿ ತಪ್ಪು ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳುವ ಕೆಲಸವನ್ನು ಸರ್ಕಾರ ಮಾಡುತ್ತಾ ಬಂದಿದೆ. ಇನ್ನು ಮುಂದೆ ಸಹ ಹಾಗೆಯೇ ಮಾಡಲಾಗುವುದು.

ಶ್ರೀ ಬಿ. ಲಕ್ಕಪ್ಪ.—ಖಾಸಗಿಯವರಿಗೆ ಸಹಕಾರ ಸಂಘಗಳವರಿಗೆ ಅನುಮತಿ ಕೊಡುವಾಗ ಅಧಿಕಾರಿಗಳು ಲಂಚ ಪಡೆದು ನ್ಯಾಯಬೆಲೆ ಅಂಗಡಿಗಳನ್ನು ನಡೆಸಲು ಅವಕಾಶ ಕೊಟ್ಟಿದ್ದಾರೆ.

ಶ್ರೀ ಬಸವರಾಜ್ ಪಾಟೀಟ್ ಅಸ್ಸರಿ.—ಮಾನ್ಯ ಸದಸ್ಯರು ನೇರವಾಗಿ ಇಂತಹ ಅಂಗಡಿಯವರು ತಪ್ಪು ಮಾಡಿದ್ದಾರೆ, ಇಂತಹವರು ಹಣ ತೆಗೆದುಕೊಂಡಿದ್ದಾರೆಂದು ಹೆಸರು ಕೊಟ್ಟರೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುವ ಭರವಸೆಯನ್ನು ಕೊಡುತ್ತೇನೆ.

ಶ್ರೀ ಬಿ. ರಾಚಯ್ಯ.—ಪ್ರಶ್ನೆ ನಂ. ೧೩೩ (೬) ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಗಳಿಗೆ ಸೇರಿರುವುದರಿಂದ ಅವರು ಉತ್ತರ ಕೊಡಬೇಕೆಂದು ಇದನ್ನು ಅವರಿಗೆ ವರ್ಗಾಯಿಸಲಾಗಿದೆ.

ರಾಜ್ಯದಲ್ಲಿ ಖಾಲಿಯಿರುವ ವೈದ್ಯಾಧಿಕಾರಿಗಳ ಹುದ್ದೆಯ ಬಗ್ಗೆ

೫೯೪ ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ),—ಮಾನ್ಯ ಆರೋಗ್ಯ ಮಂತ್ರಿ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಖಾಲಿಯಿರುವ ವೈದ್ಯಾಧಿಕಾರಿಗಳ ಹುದ್ದೆಗಳ ಸಂಖ್ಯೆ.

ಆ) ಮೇಲ್ಕಂಡ ಹುದ್ದೆಗಳನ್ನು ಭರ್ತಿ ಮಾಡದೆಯಿರುವ ಕಾರಣ.

ಇ) ಕೊಡಗು ಜಿಲ್ಲೆಯಲ್ಲಿ ತುಂಬಬೇಕಾದ ವೈದ್ಯಾಧಿಕಾರಿಗಳ ಹುದ್ದೆಗಳು.

ಶ್ರೀ ಬಿ. ರಾಚಯ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ೨೯೬

ಆ) ಸ್ನಾತಕೋತ್ತರ ಶಿಕ್ಷಣಕ್ಕೆ ನಿಯೋಜಿಸಿರುವುದರಿಂದ ಅನಧಿಕೃತ ಗೈರು ಹಾಜರಾಗಿರುವುದರಿಂದ ನೇಮಿಸಿದ ಹೊಸ ವೈದ್ಯರು ಕೆಲಸಕ್ಕೆ ಹಾಜರಾಗದೇ ಇದ್ದ ಕಾರಣ ಮತ್ತು ವರ್ಗಾವಣೆಯಾಗಿರುವುದರಿಂದ.

ಇ) ಗಂಡಸರು ೧೭ ಹೆಂಗಸರು ೫ ಸರ್ಕಾರಕ್ಕೆ ಬಂದಿರುವ ತೋಕಸೇವಾ ಆಯೋಗದ ಪಟ್ಟಿಯಲ್ಲಿ ಮೇಲ್ಕಂಡಹುದ್ದೆಗಳನ್ನು ಶೀಘ್ರದಲ್ಲಿಯೇ ತುಂಬಲಾಗುವುದು.

ಶ್ರೀ ಡಿ. ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೇ ಇಲ್ಲಿ ಅನಧಿಕೃತ ಗೈರು ಹಾಜರಿ ಮೇಲೆ ಯಾರು ಹೋಗಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೀರಾ ? ಎಷ್ಟು ಜನರ ಮೇಲೆ ಕ್ರಮ ತೆಗೆದು ಕೊಂಡಿದ್ದೀರಿ ?

ಶ್ರೀ ಬಿ. ರಾಚಯ್ಯ.—ಯಾರು ಅನಧಿಕೃತ ಗೈರು ಹಾಜರಿದ್ದಾರೆ ಈಗ ನೋಟೀಸ್‌ಗಳನ್ನು ಕೊಡುತ್ತಿದ್ದೇನೆ ಮತ್ತು ಅವರಿಂದ ವಿವರಣೆ ಕೇಳುತ್ತಿದ್ದೇನೆ ಅವರಿಂದ ವಿವರಣೆಯನ್ನು ಕೇಳಿದಮೇಲೆ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ಡಿ. ಎ. ಚಿನ್ನಪ್ಪ.—ಪೋಸ್ಟ್ ಮಾಡಿದ ಡಾಕ್ಟರ್‌ಗಳು ರಿಪೋರ್ಟ್ ಮಾಡುವುದಿಲ್ಲವೆಂದು ಹೇಳಿದ್ದೀರಿ. ಅವರ ಮೇಲೆ ಕ್ರಮ ತೆಗೆದುಕೊಂಡಿದ್ದೀರಾ ? ರಿಪೋರ್ಟ್ ಮಾಡಿಕೊಳ್ಳದೇ ಇದ್ದರೆ ಅಂತ ಹವರ ಮೇಲೆ ಕೂಡಲೇ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ರಾಚಯ್ಯ.—ರಿಪೋರ್ಟ್ ಮಾಡಿಕೊಳ್ಳದೇ ಇದ್ದವರ ಬಗ್ಗೆ ನೋಟೀಸ್ ಕಳಿಸಿದ್ದೇನೆ. ನೋಟೀಸ್‌ಗೆ ಸಮಜಾಯಿಷಿ ಬಂದಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ ಈಗಾಗಲೇ ಮೂರು ಜನರನ್ನು ಬರ್ತರ್ಫ್ ಮಾಡಿದ್ದೇನೆ.

ಶ್ರೀ ಡಿ. ಎ. ಚಿನ್ನಪ್ಪ.—ರಿಪೋರ್ಟ್ ಮಾಡಿಕೊಳ್ಳದೇ ಇರುವವರು ಎಷ್ಟು ಜನ ? ಅನಧಿಕೃತ ವಾಗಿ ಗೈರುಹಾಜರಾಗಿರುವವರು ಎಷ್ಟು ಜನರು ಎಂದು ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಬಿ. ರಾಚಯ್ಯ.—ಅನಧಿಕೃತವಾಗಿ ಹೊರಗಡೆ ದೇಶಕ್ಕೆ ಹೋದವರು ಕೆಲವರು ಇದ್ದಾರೆ. ಕೆಲವೊಂದು ಸ್ಥಳಗಳಿಗೆ ಹಾಕಿದರೂ ಹಾಜರಾಗದೇ ಇರುವವರೂ ಇದ್ದಾರೆ ಇದಕ್ಕೆ ಸಂಬಂಧಪಟ್ಟ ಹಾಗೆ ಶಿಸ್ತಿನ ಕ್ರಮವನ್ನು ಕೂಡ ನಾನು ತೆಗೆದುಕೊಂಡಿದ್ದೇನೆ.

ಶ್ರೀ ಡಿ. ಎ. ಚಿನ್ನಪ್ಪ.—ಅಧ್ಯಕ್ಷರೇ, ಕೊಡಗಿನಲ್ಲಿ.....

ಅಧ್ಯಕ್ಷರು.—ನಿಮಗೆ ಮೂರು ಸಲ ಅವಕಾಶ ಕೊಟ್ಟಿದ್ದೇನೆ ಮುಂದಿನ ಪ್ರಶ್ನೆ ಶ್ರೀ ಗೋಪಾಲ ಮಂಕುಂದ ಕಾನಡೆಯವರು.....

ಶ್ರೀ ಡಿ. ಎ. ಚಿನ್ನಪ್ಪ.—ಅಧ್ಯಕ್ಷರೇ.....

ಅಧ್ಯಕ್ಷರು.—ನೀವು ಏನು ಹೇಳಿದರೂ ಅದು ರೆಕಾರ್ಡ್ ಆಗುವುದಿಲ್ಲ ನಿಮಗೆ ಮೂರು ಸಲ ಅವಕಾಶ ಕೊಟ್ಟಿದ್ದೇನೆ. ಶ್ರೀ ಕಾನಡೆಯವರೇ ನೀವು ಪ್ರಶ್ನೆ ಕೇಳಿ.

ರಾಜ್ಯದಲ್ಲಿರುವ ಸೇಂದಿ ಮರಗಳ ಬಗ್ಗೆ

೧೩. ಶ್ರೀ ಗೋಪಾಲ್ ಮಂಕುಂದ ಕಾನಡೆ (ಸಿರ್ಸಿ).—ಮಾನ್ಯ ರಾಜ್ಯ ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಸೇಂದಿ ಮರಗಳ ಸಂಖ್ಯೆ ಎಷ್ಟು (ಪ್ರತಿ ಜಿಲ್ಲಾವಾರು ಅಂಕಿ-ಸಂಖ್ಯೆ ವಿವರ ನೀಡುವುದು) ?

ಆ) ಸೇಂದಿ ಮಾರಾಟ ಮಾಡಲು ಗುತ್ತಿಗೆದಾರರಿಗೆ ನೀಡುವಾಗ ಸರ್ಕಾರದವರು ಅನುಸರಿಸುವ ನಿಯಮಗಳೇನು ?

ಇ) ಗುತ್ತಿಗೆದಾರರು ಪರವಾನಿಗೆ ಹೊಂದಿರುವರೆ, ಹಾಗೂ ಪರವಾನಿಗೆ ಪಡೆದಲ್ಲದವರಿಗೆ ಗುತ್ತಿಗೆ ನೀಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಈ) ಹಾಗಿದ್ದಲ್ಲಿ, ಇಂತಹವರ ಮೇಲೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಉ) ರಾಜ್ಯದಲ್ಲಿ ಮಾರಾಟವಾಗುತ್ತಿರುವ ಪ್ರತಿ ದಿವಸ ಸೇಂದಿಯಂ ಪ್ರಮಾಣವೆಷ್ಟು ?

ಊ) ಪ್ರತಿ ತಿಂಗಳಿಗೆ ಸರ್ಕಾರಕ್ಕೆ ಸೇಂದಿ ಮಾರಾಟದಿಂದ ಬರುವ ಆದಾಯವೆಷ್ಟು ಹಾಗೂ ಒಂದು ಲೀಟರ್ ಸೇಂದಿಗೆ ಪುಡಿ ಮಿಶ್ರಣ ಮಾಡಿ, ೫೦೦ ಲೀಟರ್‌ಗೆ ಹೆಚ್ಚಿಸಿ ಮಾರಾಟ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ, ?

ಋ) ಹಾಗಿದ್ದಲ್ಲಿ ಇಂತಹವರ ಮೇಲೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?